ಅಸಲು ದಾವೆ ಸಂಖ್ಯೆ - 303/2019
ಪಿಡಬ್ಲ್ಯೂ - 04

ದಿನಾಂಕಃ 08.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಎಂ ಜಿ ಎನ್ ವಕೀಲರಿಂದಃ-

1. ವಾದಿಯು ನನಗೆ ಪರಿಚಯದ ವ್ಯಕ್ತಿ. ವಾದಿಯು ನನಗೆ ಸೋದರಅತ್ತೆಯ ಮಗ ಎಂದರೆ ಸರಿಯಲ್ಲ. ವಾದಿಯು ನನ್ನ ತಂದೆ ಗುರುಸಿದ್ದನಗೌಡ ಪಾಟೀಲರವರ ಅಕ್ಕನ ಮಗ ಎಂದರೆ ಸರಿಯಲ್ಲ. ಮರಿಯಪ್ಪ ಹರಿಜನ ಅವರಿಗೆ ಪ್ರತಿವಾದಿಗಳು ಮೂರು ಜನ ಗಂಡು ಮಕ್ಕಳು ಇದ್ದು ಮತ್ತು ಒಬ್ಬಳು ಹೆಣ್ಣು ಮಗಳು ಇದ್ದಾಳೆ. ಹೆಣ್ಣು ಮಗಳ ಹೆಸರು ನನಗೆ ಗೊತ್ತಿಲ್ಲ. ಸರ್ವೆ ನಂ.79/2 ದಾವಾ ಆಸ್ತಿಯಾಗಿರುತ್ತದೆ. ದಾವಾ ಆಸ್ತಿಯ ಮೂಲ ಸರ್ವೆ ನಂಬರು 79/2 ಮತ್ತು ಅದರ ಮೂಲ ಕ್ಷೇತ್ರ 03 ಎಕರೆ 35 ಗುಂಟೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ಉತಾರವನ್ನು ನೋಡಿರುತ್ತೇನೆ. ದಾವಾ ಆಸ್ತಿಯು ವಾದಿಯ ಒಟ್ಟು ಕುಟುಂಬದ ಜಮೀನು ಎಂಬುವುದಕ್ಕೆ ಯಾವ ದಾಖಲೆಗಳನ್ನು ನೋಡಿದ್ದೀರಿ ಎಂಬ ಸೂಚನೆಗೆ ಸಾಕ್ಷಿಯು ಹಲವಾರು ಬಾರಿ ಅದೇ ಪ್ರಶ್ನೆಯನ್ನು ಕೇಳಿದರೂ ಬೇರೆ ಉತ್ತರಗಳನ್ನು ನೀಡಿರುತ್ತಾರೆ.

2. ಮುಖ್ಯ ವಿಚಾರಣಾ ಪ್ರಮಾಣಪತ್ರದ ಸಂಗತಿಗಳನ್ನು ನಾನೇ ಮಾಹಿತಿ ನೀಡಿ ಬರೆಸಿರುತ್ತೇನೆ. ದಾವಾ ಆಸ್ತಿಯು 1957 ರಿಂದ 1970 ರವರೆಗೆ ಗದಿಗೆವ್ವ ಕೋಂ ಚಂದ್ರಗೌಡ ಪಾಟೀಲರವರ ಹೆಸರಿನಲ್ಲಿದ್ದ ಬಗ್ಗೆ ಉತಾರಗಳನ್ನು ನೋಡಿದ್ದೇನೆ. ಉತಾರಗಳನ್ನು ಹೊರತುಪಡಿಸಿ ಇತರ ದಾಖಲೆಗಳನ್ನು ನಾನು ನೋಡಿಲ್ಲ. ಸದರಿ ವರ್ಷಗಳವರೆಗೆ ಗದಿಗೆವ್ವ ರವರ ಹೆಸರಿನಲ್ಲಿ ರೈತ ನಾತೆಯ ಆಧಾರದ ಮೇಲೆ ಪೋಕಳ್ ಎಂಟ್ರಿ ಇತ್ತು ಎಂದರೆ ಸರಿಯಲ್ಲ. ರುದ್ರಗೌಡ ಮತ್ತು ಆಕೆಯ ಹೆಂಡತಿ ನೀಲವ್ವ ಯಾವ ವರ್ಷ, ಯಾವ ದಿನ ಮತ್ತು ತಿಂಗಳಂದು ಮರಣ ಹೊಂದಿರುತ್ತಾರೆ ಗೊತ್ತಿಲ್ಲ. ದಾವಾ ಆಸ್ತಿಯು ಪ್ರತಿವಾದಿಯರ ಕಬ್ಜಾ ಮತ್ತು ವಹಿವಾಟಿಯಲ್ಲಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರತಿವಾದಿಯರ ಕಬ್ಜಾ ವಹಿವಾಟಿಯಲ್ಲಿ ಇರುವುದರಿಂದ ಅದರ ವಹಿವಾಟಿಗೆ ವಾದಿಗೆ ತೊಂದರೆ ಕೊಡುವ ಪ್ರಸಂಗ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ವಾದಿಯಾಗಲೀ, ಆತನ ಸಹೋದರನಾಗಲಿ ಯಾವ ಕಾಲಕ್ಕೂ ವಹಿವಾಟು ಮಾಡುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ನನ್ನ ಸೋದರಅತ್ತೆಯ ಮಗ ಇರುವುದರಿಂದ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಎಂದಿಗೂ ದಾವಾ ಆಸ್ತಿಯ ಕಬ್ಜಾ ಮತ್ತು ವಹಿವಾಟಿಯಲ್ಲಿ ಇಲ್ಲದೇ ಇದ್ದರೂ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ-ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.

ದಿನಾಂಕಃ 08.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಎಂ ಜಿ ಎನ್ ವಕೀಲರಿಂದಃ-**

1. ಪ್ರತಿವಾದಿಯರ ತಂದೆ ಮರಿಯಪ್ಪ ಹರಿಜನ ಅವರಿಗೆ ಮೂರು ಜನ ಗಂಡು ಮಕ್ಕಳು. ಆತನಿಗೆ ಎಷ್ಟು ಜನ ಗಂಡು ಮಕ್ಕಳು ಅಂತಾ ಗೊತ್ತಿಲ್ಲ. ಈ ದಾವೆಯನ್ನು ನರಸನಗೌಡ ಪಾಟೀಲರವರು ರುದ್ರಗೌಡ ಪಾಟೀಲರವರ ವಿರುದ್ದ ಸಲ್ಲಿಸಿರುತ್ತಾರೆ. ದಾವಾ ಆಸ್ತಿಯು ಹಿಸ್ಸೆಯ ಅಧಾರದ ಮೇಲೆ ತನ್ನದೆಂದು ಈ ದಾವೆಯನ್ನು ಸಲ್ಲಿಸಲಾಗಿದೆ. ದಾವಾ ಆಸ್ತಿಯ ಸರ್ವೆ ನಂ.79/2 ಅ ಇದ್ದು ಅದರ ಮೂಲ ಸರ್ವೆ ನಂಬರು ನನಗೆ ಗೊತ್ತಿಲ್ಲ ಮತ್ತು ಅದೇ ರೀತಿ ಅದರ ಮೊದಲ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. ದಾವಾ ಆಸ್ತಿಯ ಮೂಲ ಸರ್ವೆ ನಂಬರು ಜಮೀನು ಗದಿಗೆಮ್ಮ ಪಾಟೀಲರವರ ಜಮೀನು ಆಗಿತ್ತು. ಗದಿಗೆಮ್ಮ ಅವರ ಹೆಸರಿನಲ್ಲಿ ಸದರಿ ಜಮೀನು ಇದ್ದ ಬಗ್ಗೆ ದಾಖಲೆಗಳನ್ನು ನೋಡಿಲ್ಲ.

2. ನಾನು ನೀಡಿದ ಮಾಹಿತಿಯಂತೆ ವಕೀಲರು ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ತಯಾರಿಸಿರುತ್ತಾರೆ. ರುದ್ರಗೌಡ ಮತ್ತು ಆಕೆಯ ಹೆಂಡತಿ ನೀಲವ್ವ ಯಾವ ವರ್ಷ, ಯಾವ ದಿನ ಮತ್ತು ತಿಂಗಳಂದು ಮರಣ ಹೊಂದಿರುತ್ತಾರೆ ಗೊತ್ತಿಲ್ಲ. ದಾವಾ ಆಸ್ತಿಯು ವಾದಿಯ ಒಟ್ಟು ಕುಟುಂಬದ ಆಸ್ತಿ ಎಂದು ನಾನು ದಾಖಲೆಗಳನ್ನು ನೋಡಿಲ್ಲ. ದಾವಾ ಆಸ್ತಿಯು ಗದಿಗೆವ್ವ ಕೋಂ ಚಂದ್ರಗೌಡ ಪಾಟೀಲರವರ ಹೆಸರಿನಲ್ಲಿ ಮೊದಲಿಗೆ ಇದ್ದ ಬಗ್ಗೆ ಖರೀದಿಪತ್ರವನ್ನು ನೋಡಿರುತ್ತೇನೆ. ಸದರಿ ಖರೀದಿಪತ್ರವು ಯಾವ ವರ್ಷದಲ್ಲಿ ಆಗಿದೆ ಎಂದು ಗೊತ್ತಿಲ್ಲ.

3. ದಾವಾ ಜಮೀನಿನ ಪಕ್ಕದಲ್ಲಿ ನನಗೆ ಸೇರಿದ ಜಮೀನು ಇವೆ. ನನ್ನ ಜಮೀನಿನ ಸರ್ವೆ ನಂ. 71/2. ದಾವಾ ಆಸ್ತಿಯ ಪೂರ್ವಕ್ಕೆ ಮುಳಗುಂದ ರವರ ಆಸ್ತಿ, ಪಶ್ಚಿಮಕ್ಕೆ ವಾದಿಗೆ ಸೇರಿದ ಆಸ್ತಿ, ಉತ್ತರಕ್ಕೆ ಸರಕಾರಿ ರಸ್ತೆ ಮತ್ತು ದಕ್ಷಿಣಕ್ಕೆ ಪ್ರತಿವಾದಿಯರ ಆಸ್ತಿಇವೆ. ಪ್ರತಿವಾದಿಯರು ಎಂದರೆ ತಿಪ್ಪಣ್ಣ, ಫಕ್ಕೀರಪ್ಪ ಮತ್ತು ಯಲ್ಲಪ್ಪ. ದಾವಾ ಆಸ್ತಿಯು ವಾದಿಗೆ ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದು ಆತನಿಗೆ ಕುಟುಂಬದಲ್ಲಿ ಆದ ವಿಭಾಗದಂತೆ ಬಂದಿರುತ್ತದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯ ವಹಿವಾಟಿಗೆ ವಾದಿಗೆ ತೊಂದರೆ ನೀಡಿರುತ್ತಾರೆ ಎಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರತಿವಾದಿಯರ ಕಬ್ಜಾ ಮತ್ತು ವಹಿವಾಟಿಯಲ್ಲಿದೆ ಎಂದರೆ ಸಾಕ್ಷಿಯು ವಾದಿಯ ಕಬ್ಜಾ ಮತ್ತು ವಹಿವಾಟಿಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಯಾವ

ಕಾಲಕ್ಕೂ ವಾದಿಯ ಕಬ್ಜಾ ಮತ್ತು ವಹಿವಾಟಿಯಲ್ಲಿ ಇಲ್ಲದಿದ್ದರೂ ಆತನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ-ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.